OS No.77/2024.

PW3.

**ಸಾಕ್ಷಿಯನ್ನು ದಿನಾಂಕಃ 20-11-2025 ರಂದು ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ.3 ರವರ ಶ್ರೀಬಿ.ಆರ್.ಡಿ ವಕೀಲರಿಂದ.**

ದಾವಾ ಆಸ್ತಿಗಳ ಬಾಜು ನನಗೆ ಸೇರಿದ ಜಮೀನು ಇರುತ್ತದೆ. ದಾವಾ ಆಸ್ತಿಗಳು ಒಟ್ಟು ಮೂರು ಇರುತ್ತವೆ. ದಾವಾ ಆಸ್ತಿಗಳ ಸರ್ವೆ ನಂ.4/1 ಕ್ಷೇತ್ರ 06 ಎಕರೆ 02 ಗುಂಟೆ, ಸರ್ವೆ ನಂ.7/1 ಕ್ಷೇತ್ರ 04 ಎಕರೆ 21 ಗುಂಟೆ ಸರ್ವೆ ನಂ.8/1 ಕ್ಷೇತ್ರ 04 ಎಕರೆ 10 ಗುಂಟೆ ಇರುತ್ತದೆ.

ವೆಂಕಪ್ಪ ಇವರು ಬಹಳ ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ವಾದಿ ನಂ.2 ಇವಳು ಹೆಂಡತಿ ಮತ್ತು ವಾದಿ ನಂ1 ಹಾಗೂ ಪ್ರತಿವಾದಿ ನಂ.1 ಇವರು ವೆಂಕಪ್ಪನ ಮಕ್ಕಳು ಆಗಬೇಕು ಎಂದರೆ ಸರಿ. ವೆಂಕಪ್ಪ ಇವನು ತೀರಿಕೊಂಡ ನಂತರ ವಾದಿಯರ ಮತ್ತು ಪ್ರತಿವಾದಿ ನಂ.1 ರವರ ಹೆಸರುಗಳು ವಾರಸಾ ಪ್ರಕಾರ ದಾವಾ ಆಸ್ತಿಗಳಿಗೆ ದಾಖಲಾಗಿದ್ದವು ಎಂದರೆ ಸರಿ. ತದನಂತರ ವಾದಿಯರು ಪ್ರತಿವಾದಿ ನಂ.1 ರವರಿಗೆ ದಾವಾ ಆಸ್ತಿಗಳಲ್ಲಿ ವಾಟ್ನಿ ಮಾಡಿ ತಮ್ಮ ಹಿಸ್ಸೆ ಕೋಡಲು ಕೇಳಿದಾಗ ಪ್ರತಿವಾದಿ ನಂ1 ರವರು ಅದಕ್ಕೆ ಒಪ್ಪದೆ ಇರುವಾಗ ವಾದಿಯರು ಈ ದಾವೆ ಹಾಕಿರುತ್ತಾರೆ. ಸದರಿ ಸಮಯದಲ್ಲಿ ನಾನು ಹಿರಿತನ ಮಾಡಿರುವುದಿಲ್ಲ.

ನಾನು 3 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ವಾದಿಯರು ಪ್ರತಿವಾದಿ ನಂ.1 ರವರಿಗೆ ದಾವಾ ಆಸ್ತಿಗಳಲ್ಲಿಯ ತಮ್ಮ ಹಿಸ್ಸೆಯನ್ನು ಕೇಳಿದಾಗ ಆ ಸಮಯದಲ್ಲಿ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ ಯಾರ ಹೆಸರು ಇತ್ತು ಎಂದು ನನಗೆ ಮಾಹಿತಿ ಇರುವುದಿಲ್ಲ. ವಾದಿಯರು ಪ್ರತಿವಾದಿ ನಂ.1 ರವರಿಗೆ ದಾವಾ ಆಸ್ತಿಗಳಲ್ಲಿಯ ಹಿಸ್ಸೆ ಕೇಳಿರುವ ವಿಷಯ ನನಗೆ 2024 ಮಾರ್ಚ ತಿಂಗಳಿನಲ್ಲಿ ಗೊತ್ತಾಗಿರುತ್ತದೆ ಎಂದರೆ ಸರಿ. ಮಾರ್ಚ-2024 ಮೊದಲು ವಾದಿಯರ ಮತ್ತು ಪ್ರತಿವಾದಿ ನಂ.1 ರವರ ನಡುವೆ ಆದ ವಾಟ್ನಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಅವರ ನಡುವೆ ಯಾವುದೇ ವಾಟ್ನಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ವಾಟ್ನಿ ವಿಷಯವಾಗಿ ನಾನು ವಾದಿಯರಿಗೆ ಕೇಳಿದಾಗ ಅವರು ನನಗೆ ಯಾವುದೇ ವಾಟ್ನಿ ಆಗಿರುವುದಿಲ್ಲ ಎಂದು ಹೇಳಿರುತ್ತಾರೆ. ಈ ದಾವೆಯನ್ನು ವಾದಿಯರು ಒಟ್ಟು ಮೂರು ಜನರ ವಿರುದ್ಧ ಹಾಕಿರುತ್ತಾರೆ.

ಪ್ರತಿವಾದಿ ನಂ.3 ರವರನ್ನು ವಾದಿಯರು ಈ ದಾವೆಯಲ್ಲಿ ಏಕೆ ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿ ನಂ.1 ಮತ್ತು 2 ಇವರು ಪ್ರತಿವಾದಿ ನಂ.3 ಇವರ ಪರವಾಗಿ ಒಂದು ಖೊಟ್ಟಿ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ವಾದಿಯರು ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ. ಪ್ರತಿವಾದಿ ನಂ.3 ರವರ ಹೆಸರಿನಲ್ಲಿರುವ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ. ಪ್ರತಿವಾದಿ ನಂ.3 ಇವರು ದಾವಾ ಆಸ್ತಿಗಳನ್ನು ಪ್ರತಿವಾದಿ ನಂ.1 ಮತ್ತು 2 ರವರ ಕಡೆಯಿಂದ ಖರೀದಿ ಮಾಡಿದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿ ಸರ್ವೆ ನಂ.4/1 ಇದು ಪ್ರತಿವಾದಿ ನಂ.1 ರವರ ಹೆಸರಿನಲ್ಲಿದ್ದು ಮತ್ತು ಅದರ ಬಗ್ಗೆ ವಿಚಾರಣೆ ಮಾಡಿ ದಿನಾಂಕ 08-08-2018 ರಂದು ಪ್ರತಿವಾದಿ ನಂ.3 ರವರು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇರುವುದಿಲ್ಲ, ಆದರೆ ವಾದಿಯರು ದಾವಾ ಆಸ್ತಿಗಳ ಸ್ವಾಧೀನತೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಗಳಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು ನೋಡಿರುವುದಿಲ್ಲ.

ಮೂಲ ಪುರುಷ ವೆಂಕಪ್ಪ ಇವರು ತೀರಿಕೊಂಡ ನಂತರ ವಾದಿಯರು ಮತ್ತು ಪ್ರತಿವಾದಿ ನಂ.1 ರವರ ನಡುವೆ ಆದ ವಾಟ್ನಿಯಲ್ಲಿ ದಾವಾ ಆಸ್ತಿ ರಿ.ಸ.ನಂ.4/1 ಇದು ಪ್ರತಿವಾದಿ ನಂ.1 ರವರ ಪಾಲಿಗೆ ಬಂದಿತ್ತು ಮತ್ತು ಅದನ್ನು ಅವರು ಪ್ರತಿವಾದಿ ನಂ.3 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ವಾದಿಯರು ಮತ್ತು ಪ್ರತಿವಾದಿ ನಂ.1 ರವರ ನಡುವೆ ಯಾವುದೇ ವಾಟ್ನಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ನ್ಯಾಯಾಲಯಕ್ಕೆ ಈ ದಾವೆಯಲ್ಲಿ ಸಾಕ್ಷ ನುಡಿಯಲು ಬರುವುದಕ್ಕಿಂತ ಮುಂಚೆ ನಾನು ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ಸದರಿ ಸಮಯದಲ್ಲಿ ದಾವಾ ಆಸ್ತಿಯ ರಿಸ ನಂ.4/1 ಇದು ಪ್ರತಿವಾದಿ ನಂ.3 ರವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಖರೀದಿ ಪತ್ರದ ಪ್ರಕಾರ ರಿಸ ನಂ.4/1 ರಲ್ಲಿ ಪ್ರತಿವಾದಿ ನಂ.3 ರವರು ಸ್ವಾಧೀನತೆಯಲ್ಲಿ ಇದ್ದರು ಸಹಿತ ನಾನು ವಾದಿಯರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿಃ**

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2025.12.31 17:59:56 +0530